ಕೇಳಲು ಬಂದರೆ ಅವರ ಮೇಲೆ ಏರಿ ಹೋಗಬೇಕು. ಸಮಯ ಬಂದರೆ ಅದೇ ಬೇಲಿಗೂಟ ಕಿತ್ತು ಎರಡು ಬಾರಿಸಲೂ ತಯಾರಾಗಿರಬೇಕು. ಬಣಗಲೆಂಬ ಈ ಪುಟಗೋಸಿ ಗ್ರಾಮದ ಯಾವುದೇ ಜಾಗವನ್ನು ನುಂಗಿ ನೀರ್ಕುಡಿಯುವುದಕ್ಕೆ ಅಷ್ಟು ಸಾಕು. ಮೋಸಗಾರರಿಂದಲೇ ತುಂಬಿರುವ ಈ ಜಗತ್ತಿನಲ್ಲಿ ಯಾರು ಅತಿ ಹೆಚ್ಚು ಆಕ್ರಮಣಕಾರಿಯಾಗಿರುತ್ತಾನೋ ಅವನು ಗೆಲ್ಲುತ್ತಾನೆ.

ಇದಾದ ಬಳಿಕ ಅವನಿಗೆ ಕಂಡಿದ್ದು ತನ್ನ ಬೇಲಿಯ ತುದಿಯಿಂದ ಶುರುವಾಗಿದ್ದ ಎಂಪಿಎಂ ಪ್ಲಾಂಟೇಷನ್. ನೂರಾರು ಎಕರೆಗೆ ಹಬ್ಬಿ ನಿಂತಿದ್ದ ಅಕೇಶಿಯಾ ಕಾಡಲ್ಲಿ ಸ್ವಲ್ಪ ತಾನ್ಯಾಕೆ ಸೇರಿಸಿಕೊಳ್ಳಬಾರದು? ಸಮುದ್ರದಿಂದ ನಾಲ್ಕು ಚಂಬು ನೀರು ದೇಪಿದರೆ ಯಾರಿಗೆ ಗೊತ್ತಾಗುತ್ತದೆ? ಮರಗಳೇನು ಅಂಗಳಕ್ಕೆ ಬಂದು ನ್ಯಾಯ ಕೇಳುತ್ತವೆಯೇ? ಪಾದಚಾರಿಯೊಬ್ಬ ರಸ್ತೆಯ ಮೇಲೆ ಬಿದ್ದ ನೋಟೊಂದನ್ನು ಆಚೀಚೆ ನೋಡಿ ಎತ್ತಿಕೊಂಡಂತೆ ನಿಧಾನಕ್ಕೆ ತನ್ನ ಬೇಲಿಯ ಸಾಲನ್ನು ಬಿಚ್ಚಿ, ಮತ್ತೆ ಕಟ್ಟುವಾಗ ಪ್ಲಾಂಟೇಷನ್ನಿನ ಒಂದಿಷ್ಟು ಜಾಗ ಮರ ಕಡಿದು, ತನ್ನ ಹುಂಡಿಗೆ ಸೇರಿಸಿಯೇ ಕಟ್ಟಿಸಿದ ಋತುರಾಜ. ಅದಾದ ಕೆಲ ದಿನಗಳು ಎಂಪಿಎಂನ ಯಾರಾದರೂ ಬರುವರೇನೋ ಎಂದು ಕಾದ. ಬಂದರೆ ಬೈಯುವುದಕ್ಕೆ ಸಾಕಷ್ಟು ಪದ ಭಂಡಾರವನ್ನೂ ಸಂಗ್ರಹಿಸಿಕೊಂಡ. ಯಾವ ಅಧಿಕಾರಿಯೂ ಬಾರದಿದ್ದಾಗ ಮುಂದಿನ ವರ್ಷ ಮತ್ತಷ್ಟು ಜಾಗವನ್ನು ಸೇರಿಸಿಕೊಂಡ. ಹೀಗೆ ಅವನ ಬೇಲಿ ಎರಡೂ ಬಾಹುಗಳನ್ನು ಚಾಚಿ ವರ್ಷಾವರ್ಷ ಕಾಲು, ಅರ್ಧ ಎಕರೆಗಳಷ್ಟು ಜಾಗವನ್ನು ತನ್ನೊಳಗೆ ಸೇರಿಸಿಕೊಳ್ಳುತ್ತಾ ಮುನ್ನುಗ್ಗತೊಡಗಿತು.

ಐದಾರು ವರ್ಷ ಕಳೆಯುವಷ್ಟರಲ್ಲಿ ಸುಮಾರು ನಾಲ್ಕೆಕರೆ ಜಾಗ ಯಾವ ಅರ್ಜಿ, ಕಾಗದ ಪತ್ರಗಳೂ ಇಲ್ಲದೇ ಋತುರಾಜನ ಯಜಮಾನಿಕೆಗೆ ವರ್ಗಾವಣೆಯಾಗಿತ್ತು. ಆ ಕಡೆ ಬೇಲಿಯ ಅಂಚು ವಿಸ್ತಾರವಾಗುತ್ತಿರುವಾಗಲೇ ಈ ಕಡೆಯಿಂದ ಋತುರಾಜ ಮರ ಕಡಿದು ಅಡಿಕೆ ಸಸಿ ನೆಟ್ಟಿದ್ದ. ತಾವು ನೆಡಲ್ಪಟ್ಟ ಜಾಗವು ಸ್ವಂತದ್ದೋ, ಅತಿಕ್ರಮಿಸಿದ್ದೋ ಗೊತ್ತಿಲ್ಲದ ಸಸಿಗಳು ದಷ್ಟಪುಷ್ಟವಾಗಿ ಬೆಳೆಯತೊಡಗಿದವು.

ಖಾಲಿ ಜಾಗಕ್ಕೆ ಬೇಲಿ ಹಾಕಿದಾಗ ಆಗದ ಆತಂಕ ಈಗ ಕೈಯಾರೆ ನೆಟ್ಟ ಅಡಕೆ ಸಸಿಗಳು ಬೆಳೆದಂತೆಲ್ಲ ಜಾಸ್ತಿಯಾಗತೊಡಗಿತು ಋತುರಾಜನಿಗೆ. ಯಾವ ದಿನ ಯಾವ ದಿಕ್ಕಿನಿಂದ ಎಂಪಿಎಂನವರು ಬರುತ್ತಾರೋ, ತಾನು ಕಟ್ಟಿದ ಬೇಲಿಯನ್ನು ಅಡಕೆ ಸಸಿಗಳ ಸಮೇತ ಕಿತ್ತೆಸೆಯುತ್ತಾರೋ ಎಂಬ ಭಯದಲ್ಲೇ ತೋಟದ ಲಾಲನೆಪಾಲನೆ ಮಾಡುತ್ತಿದ್ದವನಿಗೆ ಅದೃಷ್ಟದ ಬಾಗಿಲು ತೆರೆದಿದ್ದು ಮೊದಲ ಬಾರಿಗೆ ಗ್ರಾಮ್ ಪಕ್ಷವು ಮೂರ್ನಾಡಿಯಲ್ಲಿ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿದಾಗ. ಮೂರ್ನಾಡಿಯಲ್ಲಿನ್ನು ಸುವರ್ಣ ಯುಗ ಆರಂಭವಾಗಲಿದೆ ಎಂಬ ಘೋಷವಾಕ್ಯದೊಂದಿಗೆ ಎರಡೂ ಕೈ ಮೇಲೆತ್ತಿ ನಮಸ್ಕಾರ ಮಾಡುತ್ತ ಬಂದ ಜಗದೀಶರ ವಿಶ್ವಾಸ ಗಿಟ್ಟಿಸುವಾಗ ಈ ಒತ್ತುವರಿಯನ್ನು ಉಳಿಸಿಕೊಳ್ಳುವ ಹೊಂಚೇನೂ ಇಲ್ಲದಿದ್ದರೂ 'ಇವತ್ತಲ್ಲ ನಾಳೆ ಬೇಕಾಗ್ತಾನೆ' ಎಂಬ ಸ್ವಾರ್ಥದಿಂದಲೇ ಅವರಿಗೆ ಎರಡು ಜೈಕಾರ ಎಕ್‌ಸ್ಟ್ರಾ ಕೂಗಿದ್ದ ಋತು. ಅತ್ತ ಅವರೂ ಋತುರಾಜನ ದಿಟ್ಟತನ, ತನ್ನ ಕೆಲಸಕ್ಕೆ ಹುಡುಗರನ್ನ ಒಗ್ಗೂಡಿಸುವ ಅವನ ನಾಯಕತ್ವ ಗುಣ, 'ಎಲ್ಲ ಸರಿ ಮಾಡ್ತೀನಿ' ಎಂಬೊಂದು ಮಹಾಸುಳ್ಳನ್ನು ಧರಿಸಿ ತಾನು ಬಣಗಲು ಗ್ರಾಮಕ್ಕೆ ಮೊದಲ ಬಾರಿಗೆ ಕಾಲಿಟ್ಟ ದಿನ ಅವನು ತನಗಾಗಿ ಮಾಡಿದ್ದ ತಯಾರಿಗಳು... ಇವನ್ನೆಲ್ಲ ನೋಡಿ ಖುಷಿ ಪಟ್ಟು, 'ಎಲೆಕ್ಷನ್ ಟೈಮಿಗೆ ಬೇಕಾಗ್ತಾನೆ' ಎಂಬ ದೂರಾಲೋಚನೆಯಲ್ಲಿ ಅವನ ಹೆಗಲ ಮೇಲೆ ಆತ್ಮೀಯ ಹಸ್ತವನ್ನಿಟ್ಟಿದ್ದರು. ಹೀಗೆ ಕಳ್ಳರಿಬ್ಬರು ಮುಂದೆಂದೋ ಮಾಡಲಿರುವ ದರೋಡೆಗಾಗಿ ಈಗಲೇ ಬೇಲ್ ರೆಡಿ ಮಾಡಿಕೊಳ್ಳುವಂತೆ ಇಬ್ಬರೂ ಪರಸ್ಪರರ ಸ್ನೇಹ ಸಂಪಾದಿಸಿಕೊಂಡರು.

* * *

ಋತುರಾಜನ ನಿರೀಕ್ಷೆಯೇನೂ ಹುಸಿ ಹೋಗಲಿಲ್ಲ. ಬಣಗಲು ಗ್ರಾಮದಲ್ಲಿ ತಮ್ಮ ಐನೂರೆಕರೆ ಅಕೇಶಿಯಾ ಪ್ಲಾಂಟೇಷನ್ನಿನ ಉತ್ತರದ ನಾಲ್ಕು ಎಕರೆಯನ್ನು ಯಾರೋ ಒಂದು ಕಡೆಯಿಂದ ನುಂಗುತ್ತಿರುವುದು ಗೊತ್ತಾಗಿ ಬೆಚ್ಚಿಬಿದ್ದ ಎಂಪಿಎಂನವರು ಎದ್ದೆವೋ ಬಿದ್ದೆವೋ ಎಂದು ಜೆಸಿಬಿ ಹತ್ತಿ ಬಂದೇ ಬಿಟ್ಟರು. ಹರಕು ಚಡ್ಡಿಯನ್ನು ಹರಿದೆಸೆಯುವಂತೆ ಋತುರಾಜನ ಬೇಲಿಯನ್ನು ಕಿತ್ತೊಗೆದ ಅವರು, ಅವನ ಸಸಿಗಳನ್ನೆಲ್ಲ